

بِسْمِ اللّٰہِ الرَّحْمٰنِ الرَّحِیمِ

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ 13–12–2019 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ۔

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ۔ بِسْمِ اللّٰهِ الرَّحْمٰنِ الرَّحِيمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ اِيَّاكَ نَعْبُدُ وَاِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಕಳೆದ ವಾರದ ಖುತ್‌ಬದಲ್ಲಿ ನಾನು ಹಝ್ರತ್ ಹಿಲಾಲ್ ಬಿನ್ ಉಮಯ್ಯ(ರ)ರ ಬಗ್ಗೆ ಪ್ರಸ್ತಾಪಿಸಿದ್ದೆ. ತಬೂಕ್ ಯುದ್ಧದಲ್ಲಿ ಭಾಗವಹಿಸದ ಮೂವರಲ್ಲಿ ಅವರು ಒಬ್ಬರಾಗಿದ್ದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಯುದ್ಧದಿಂದ ಮರಳಿ ಬಂದಾಗ ಅವರ ಬಗ್ಗೆ ಅತೃಪ್ತಿ ಸೂಚಿಸಿದ್ದರು. ಅವರಿಗೆ ನೀಡಿದ ಶಿಕ್ಷೆಯ ಕಾರಣ ಆ ಮೂವರು ಬಹಳ ಗಾಬರಿಗೊಂಡಿದ್ದರು. ಅವರು ಅಲ್ಲಾಹನ ಮುಂದೆ ಬಾಗುತ್ತಾ ಇಸ್ತಿಗ್‌ಫಾರ್, ತೌಬಗಳನ್ನು ಮಾಡುತ್ತಾ ಇದ್ದರು. ಆ ಮೂವರಲ್ಲಿ ಹಝ್ರತ್ ಹಿಲಾಲ್ ಒಬ್ಬರಾಗಿದ್ದರು. ಆ ಮೂವರ ಪ್ರಾರ್ಥನೆ ಅಂಗೀಕರಿಸಿ ಅವರಿಗೆ ಕ್ಷಮೆ ನೀಡಿದ ಬಗ್ಗೆ ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ವಚನವನ್ನು ಅವತೀರ್ಣಗೊಳಿಸಿದನು. ಈ ಘಟನೆಗೆ ಸಂಬಂಧಿಸಿ ಬೇರೆ ಕೆಲವು ವಿವರಣೆಗಳನ್ನು ಈಗ ನೀಡುವೆನು.

ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಯುದ್ಧಕ್ಕೆ ಹೋಗದಿರಲು ಆದ್ಯತೆ ನೀಡಿದ ಒಬ್ಬ ವ್ಯಕ್ತಿಯ ಹೆಸರು ಜದ್ದ್ ಬಿನ್ ಖೈಸ್ ಎಂದಾಗಿತ್ತು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಆ ವ್ಯಕ್ತಿಯೊಂದಿಗೆ ಹೇಳಿದರು: ರೂಮೀ ಜನರ ವಿರುದ್ಧ ಹೋರಾಡಲು ನಮ್ಮೊಂದಿಗೆ ನೀನು ಬರುವುದಿಲ್ಲವೇ? ಆ ವ್ಯಕ್ತಿ ನೆವನ ಹೇಳಿದನು: ಸ್ತ್ರೀಯರ ಕಾರಣದಿಂದ ನಾನು ಪರೀಕ್ಷೆಗೆ ಪಾತ್ರನಾಗುವೆನು. ಮನೆಯಲ್ಲಿ ಸ್ತ್ರೀಯರಿದ್ದಾರೆ. ಗಾರ್ಹಿಕ ಹೊಣೆಗಾರಿಕೆಗಳಿವೆ. ಬೇರೆ ಪ್ರಶ್ನೆಗಳೂ ಇವೆ. ಆದುದರಿಂದ ನನ್ನನ್ನು ಪರೀಕ್ಷೆಗೆ ಪಾತ್ರನನ್ನಾಗಿ ಮಾಡಬೇಡಿರಿ. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆ ವ್ಯಕ್ತಿಗೆ ಯುದ್ಧದಲ್ಲಿ ಭಾಗವಹಿಸದಿರಲು ಅನುಮತಿ ನೀಡಿದರು. ಈ ಘಟನೆಗೆ ಸಂಬಂಧಿಸಿ ಪವಿತ್ರ ಖುರ್‌ಆನಿನ ಈ ಕೆಳಗಿನ ವಚನ ಅವತೀರ್ಣವಾಯಿತು:

وَمِنْهُمْ مَّنْ يَّقُوْلُ ائْذَنْ لِّيْ وَلَا تَفْتِنِّيْ ۚ اَلَا فِي الْفِتْنَةِ سَقَطُوْا ۗ وَاِنَّ جَهَنَّمَ لَمُحِيْطَةٌۢ بِالْكٰفِرِيْنَ

**ವಮಿನ್‌ಹುಮ್ ಮನ್‌ಯಖೂಲುಅ್‌ಝುನ್ ಲೀ ವಲಾ ತಫ್‌ತಿನ್ನೀ ಅಲಾ ಫಿಲ್ ಫಿತ್‌ನತಿ ಸಖತೂ ವ ಇನ್ನ ಜಹನ್ನಮ ಲ ಮುಹೀತತುನ್ ಬಿಲ್ ಕಾಫಿರೀನ್.**

"(ಯುದ್ಧಕ್ಕೆ ಹೋಗದಿರಲು) ನನಗೆ ಅನುಮತಿ ನೀಡಬೇಕು. ನನ್ನನ್ನು ಪರೀಕ್ಷೆಗೊಳಪಡಿಸಬಾರದು ಎಂದು ನಿಮ್ಮೊಡನೆ ಹೇಳುವ ಕೆಲವರು ಸಹ ಅವರ ಪೈಕಿ ಇದ್ದಾರೆ. ತಿಳಿದುಕೊಳ್ಳಿರಿ, ಅವರು ಪರೀಕ್ಷೆಗೆ ತುತ್ತಾಗಿ ಬಿಟ್ಟಿದ್ದಾರೆ ಖಂಡಿತವಾಗಿಯೂ ಅವಿಶ್ವಾಸಿಗಳನ್ನು ನರಕವು ಸುತ್ತುವರಿಯುವುದು." (9:49).

ಮದೀನದಲ್ಲಿ ಶಾಮ್ ದೇಶದ ದಿಕ್ಕಿನ ಕಡೆಗೆ ಅಬುಲ್ ಹೈಸಮ್ ಬಿನ್ ತೈಹಾನನ ಒಂದು ಬಾವಿ ಇತ್ತು. ಅದರ ನೀರು ಬಹಳ ಉತ್ತಮವಾಗಿತ್ತು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆ ಬಾವಿಯ ನೀರು ಕುಡಿದು ಅದನ್ನು ಇಷ್ಟಪಟ್ಟರು. ಆ ಬಾವಿಯ ಒಡೆಯನಾದ ಯಹೂದಿಯ ಮನೆ ಕಪಟ ವಿಶ್ವಾಸಿಗಳು ಜಮಾಯಿಸುವ ಕೇಂದ್ರವಾಗಿತ್ತು. ಅಲ್ಲಿ ಕಪಟ ವಿಶ್ವಾಸಿಗಳು ಜಮಾಯಿಸಿದ್ದಾರೆ ಮತ್ತು ಅವರು ತಬೂಕ್ ಯುದ್ಧಕ್ಕೆ ಹೋಗುವುದರಿಂದ ಜನರನ್ನು ತಡೆಯುತ್ತಿದ್ದಾರೆ ಎಂಬ ಸಮಾಚಾರ ಲಭಿಸಿದಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಅಮ್ಮಾರ್ ಬಿನ್ ಯಾಸಿರ್‌ರೊಂದಿಗೆ ಹೇಳಿದರು: ಆ ಜನರ ಬಳಿಗೆ ಹೋಗಿ ಅವರು ಹೇಳುತ್ತಿರುವ ಮಾತುಗಳ ಬಗ್ಗೆ ಕೇಳಿರಿ. ಅವರು ನಿರಾಕರಿಸಿದರೆ ಅವರೊಂದಿಗೆ ಹೇಳಿರಿ, ನೀವು ಇಂತಿಂತಹ ಮಾತುಗಳನ್ನು ಹೇಳಿದ ಬಗ್ಗೆ ಸಮಾಚಾರ ನನಗೆ ಲಭಿಸಿದೆ ಎಂದು. ಹಝ್ರತ್ ಅಮ್ಮಾರ್ ಅಲ್ಲಿಗೆ ತಲಪಿ ಅವರೊಂದಿಗೆ ಎಲ್ಲಾ ವಿಷಯ ಹೇಳಿದಾಗ ಆ ಜನರು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮೀಪಕ್ಕೆ ಬಂದು ಯುದ್ಧದಲ್ಲಿ ಭಾಗವಹಿಸದಿರಲು ನೆವನಗಳನ್ನು ಹೇಳಲು ತೊಡಗಿದರು.

ಆಗಿನ ಸ್ಥಿತಿ ಹೇಗಿತ್ತೆಂದರೆ ಯುದ್ಧದಲ್ಲಿ ಭಾಗವಹಿಸದಿರಲು ಕೆಲವರು ಯೋಜನೆಗಳನ್ನು ರೂಪಿಸುತ್ತಿದ್ದರು. ಕಪಟ ವಿಶ್ವಾಸಿಗಳು ಅವರೊಂದಿಗೆ ಸೇರಿದ್ದರು. ಯಹೂದಿಯರು ಅವರನ್ನು ಉತ್ತೇಜಿಸುತ್ತಿದ್ದರು. ಕೆಲವರು ಯುದ್ಧಕ್ಕೆ ಹೋಗುವ ಮೊದಲು ನೆವನಗಳನ್ನು ಹೇಳಿದರು. ಮತ್ತೆ ಕೆಲವರು ಅನಂತರ, ಎಂದರೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಯುದ್ಧದಿಂದ ಮರಳಿ ಬಂದಾಗ ಅವರ ಮುಂದೆ ಹಾಜರಾಗಿ ನೆವನಗಳನ್ನು ಹೇಳಿದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಈ ವಿಷಯವನ್ನು ಅಲ್ಲಾಹನ ತೀರ್ಮಾನಕ್ಕೆ ಬಿಟ್ಟರು.

ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಡೆವಳಿಕೆ (ಸುನ್ನತ್) ಹೇಗಿತ್ತೆಂದರೆ ಅವರು ಯಾವುದಾದರೂ ಪ್ರಯಾಣದಿಂದ ಮರಳಿ ಮದೀನಕ್ಕೆ ಬರುವಾಗ ಮೊದಲು ಮಸ್‌ಜಿದ್‌ಗೆ ಹೋಗಿ ಎರಡು ರಕಅತ್ ನಮಾಝ್ ಅನುಷ್ಠಿಸುತ್ತಿದ್ದರು. ತಬೂಕಿನಿಂದ ಸೂರ್ಯೋದಯದ ನಂತರ ಮದೀನಕ್ಕೆ ಆಗಮಿಸಿದರು. ಮಸ್‌ಜಿದ್‌ನಲ್ಲಿ ಎರಡು ರಕಅತ್ ನಮಾಝ್ ಅನುಷ್ಠಿಸಿದರು. ಅನಂತರ ಜನರನ್ನು ಭೇಟಿಯಾಗಲು ಮಸ್‌ಜಿದ್‌ನಲ್ಲಿ ಕುಳಿತಿದ್ದರು. ಆಗ ಅಲ್ಲಿಗೆ ಯುದ್ಧದಲ್ಲಿ

ಭಾಗವಹಿಸಲು ಹೋಗದವರು ಅವರ ಮುಂದೆ ಬಂದು ಒಂದೊಂದು ನೆವನವನ್ನು ಹೇಳಲು ತೊಡಗಿದರು. ಪ್ರತಿಯೊಬ್ಬರು ಏನಾದರೊಂದು ನೆವನಗಳನ್ನು ಹೇಳುತ್ತಿದ್ದರು. ಅಂತಹ ಜನರ ಸಂಖ್ಯೆ ಅಂದಾಜು 80 ಆಗಿತ್ತು. ಹಝ್ರತ್ ರಸೂಲ್ ಕರೀಂ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರ ನೆವನಗಳನ್ನು ಅಂಗೀಕರಿಸಿ ಅವರಿಗೆ ಕ್ಷಮೆ ನೀಡಿ ಅವರ ಬೈಅತ್ ಸ್ವೀಕರಿಸುತ್ತಿದ್ದರು. ಅವರಿಗೋಸ್ಕರ ಇಸ್ತಿಗ್‌ಫಾರ್ ಸಹ ಮಾಡುತ್ತಿದ್ದರು. ಆದರೆ ಮೊದಲು ಪ್ರಸ್ತಾಪಿಸಿದ ಆ ಮೂವರು, ಅಂದರೆ ಹಝ್ರತ್ ಹಿಲಾಲ್ ಬಿನ್ ಉಮಯ್ಯ, ಹಝ್ರತ್ ಮರಾರ ಬಿನ್ ರಬೀಅ್ ಮತ್ತು ಹಝ್ರತ್ ಕಅಬ್ ಬಿನ್ ಮಾಲಿಕ್ ಯಾವುದೇ ಸುಳ್ಳು ನೆವನವನ್ನು ಹೇಳಲಿಲ್ಲ. ಆ ಕಾರಣದಿಂದ ಸ್ವಲ್ಪ ಕಾಲ ಈ ಮೂವರು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅತೃಪ್ತಿಗೆ ಪಾತ್ರರಾದರು. ಆ ಮೂವರು ಬಹಳ ಅತ್ತುಕೊಂಡು ಅಲ್ಲಾಹನ ಸನ್ನಿಧಿಯಲ್ಲಿ ತೌಬ ಮಾಡಿದರು. ಹಾಗೆ ಅಲ್ಲಾಹನು ಅವರ ಪ್ರಾರ್ಥನೆಗಳನ್ನು ಅಂಗೀಕರಿಸಿರುವುದಾಗಿ ಪವಿತ್ರ ಖುರ್‌ಆನ್ ವಚನದ ಮೂಲಕ ಪ್ರಕಟಿಸಿದನು.

ಇವರಲ್ಲಿ ಎರಡನೆಯ ಸಹಾಬಿ ಹಝ್ರತ್ ಮುರಾರ ಬಿನ್ ರಬೀಅ್ ಆಮರಿ[ರ]. ಅವರು ಅನ್‌ಸಾರ್‌ಗಳ ಔಸ್ ಗೋತ್ರದ ಬನೂ ಅಮರ್ ಬಿನ್ ಔಫ್ ಕುಟುಂಬಕ್ಕೆ ಸೇರಿದ್ದರು. ಅವರು ಬದರ್ ಯುದ್ಧದಲ್ಲಿ ಭಾಗವಹಿಸುವ ಭಾಗ್ಯ ಗಳಿಸಿದರು. ಬುಖಾರಿಯಲ್ಲಿ ಮತ್ತು ಸಹಾಬರ ಇತರ ಚರಿತ್ರೆ ಗ್ರಂಥಗಳಲ್ಲಿ ಅವರು ಬದರ್ ಯುದ್ಧದಲ್ಲಿ ಭಾಗವಹಿಸಿದ ಬಗ್ಗೆ ಪ್ರಸ್ತಾಪಿಸಲಾಗಿದೆ. ಅವರು ತಬೂಕ್ ಯುದ್ಧದಲ್ಲಿ ಭಾಗವಹಿಸದ ಮೂವರಲ್ಲಿ ಒಬ್ಬರಾಗಿದ್ದರು. ಅವರ ಕುರಿತು ಇದಕ್ಕಿಂತ ಹೆಚ್ಚಿನ ವಿವರಣೆಗಳು ದೊರೆತಿಲ್ಲ. ಈ ಮೂವರಲ್ಲಿ ಇನ್ನೊಬ್ಬ ಸಹಾಬಿ ಹಝ್ರತ್ ಕಅಬ್ ಬಿನ್ ಮಾಲಿಕರ ಕುರಿತು ವಿಶದವಾದ ವಿವರಣೆ ಕಳೆದ ವಾರ ಹಝ್ರತ್ ಹಿಲಾಲ್ ಬಿನ್ ಉಮಯ್ಯರ ಬಗ್ಗೆ ವಿವರಿಸುವಾಗ ನಾನು ಪ್ರಸ್ತಾಪಿಸಿದ್ದೇನೆ.

ನಾನು ವಿವರಿಸಲಿರುವ ಇನ್ನೊಬ್ಬ ಬದರಿ ಸಹಾಬಿ ಹಝ್ರತ್ ಉತ್‌ಬ ಬಿನ್ ಗಝ್ವಾನ್[ರ]. ಅವರು ಸ್ವತಃ ಹೇಳುತ್ತಾರೆ: ಇಸ್ಲಾಮ್ ಧರ್ಮಕ್ಕೆ ಮೊದಲು ಪ್ರವೇಶಿಸಿದ ಏಳು ಜನರಲ್ಲಿ ನಾನು ಏಳನೆಯವನಾಗಿದ್ದೆನು. ಇಬ್ನು ಅಸೀರ್ ಎಂಬ ಚರಿತ್ರೆಗಾರ ಹೇಳುತ್ತಾರೆ: ಅವರು ಅಬಿಸೀನಿಯಾ ದೇಶಕ್ಕೆ ಹಿಜ್‌ರತ್ ಮಾಡಿದಾಗ ಅವರ ಪ್ರಾಯ 40 ಆಗಿತ್ತು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮಕ್ಕದಲ್ಲಿ ವಾಸಿಸುತ್ತಿರುವಾಗಲೇ ಅವರು ಮಕ್ಕಕ್ಕೆ ಮರಳಿ ಬಂದರು. ಅನಂತರ ಅವರು ಹಝ್ರತ್ ಮಿಖ್‌ದಾದ್‌ರೊಂದಿಗೆ ಮದೀನಕ್ಕೆ ಹಿಜ್‌ರತ್ ಮಾಡಿದರು.

ಜಿಹಾದ್ ಬಿಸ್ಸೈಫ್ (ಖಡ್ಗ ಬಳಸಿ ಜಿಹಾದ್) ಬಗ್ಗೆ ಅನುಮತಿಸುವ ಪ್ರಥಮ ಪವಿತ್ರ ಖುರ್‌ಆನ್ ವಚನ ಹಿಜರಿ ಎರಡನೇ ವರ್ಷ ಸಫರ್ ದಿನಾಂಕ 12ರಂದು ಅವತೀರ್ಣವಾಯಿತು. ಚರಿತ್ರೆಯಿಂದ ತಿಳಿಯುವುದೇನೆಂದರೆ ಅವಿಶ್ವಾಸಿಗಳ ಕೇಡುಕಿನಿಂದ ಮುಸ್ಲಿಮರನ್ನು ಸಂರಕ್ಷಿಸಲು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಾಲ್ಕು ಕಾರ್ಯ ಯೋಜನೆಗಳನ್ನು ಕೈಗೊಂಡರು. ಅವುಗಳು ಅವರ ಉನ್ನತ ಮಟ್ಟದ ರಾಜಕೀಯ ಮುತ್ಸದ್ಧಿತನ ಮತ್ತು ಯುದ್ಧಕ್ಕೆ ಸಂಬಂಧಿಸಿದ ದೂರದೃಷ್ಟಿಯನ್ನು ಸಾಬೀತು ಗೊಳಿಸುತ್ತವೆ. ಮೊದಲನೆಯದಾಗಿ, ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸ್ವತಃ ಹೋಗಿ ಮದೀನದ ಸುತ್ತು ಮುತ್ತಲು ವಾಸಿಸುತ್ತಿದ್ದ ಗೋತ್ರಗಳ ಜನರೊಂದಿಗೆ ಪರಸ್ಪರ ಶಾಂತಿ ಸೌಹಾರ್ದ ಸ್ಥಾಪಿಸುವ ಒಪ್ಪಂದಗಳನ್ನು ಮಾಡಲು ಪ್ರಾರಂಭಿಸಿದರು. ಹಾಗೆ ಮದೀನದ ಸುತ್ತು ಮುತ್ತಲಿನ ಪ್ರದೇಶದಿಂದ ಅಪಾಯ ತಲೆದೋರದಂತೆ ಮಾಡಿದರು.

ಎರಡನೆಯದಾಗಿ, ಅವರು ಚಿಕ್ಕ ಚಿಕ್ಕ ಗುಂಪುಗಳನ್ನು ಮದೀನದ ವಿವಿಧ ದಿಕ್ಕುಗಳಿಗೆ ಕಳುಹಿಸಿ ಖುರೈಶಿಗಳ ಮತ್ತು ಅವರ ಸಹಾಯಕರ ಚಲನ ವಲನಗಳನ್ನು ತಿಳಿಯುತ್ತಾ ಇದ್ದರು. ಮುಸ್ಲಿಮರು ತಮ್ಮ ಸಂರಕ್ಷಣೆಯ ಬಗ್ಗೆ ನಿರ್ಲಕ್ಷ್ಯರಾಗಿಲ್ಲ ಆದುದರಿಂದ ಮದೀನವನ್ನು ಅಚಾನಕವಾಗಿ ಆಕ್ರಮಿಸಲು ಸಾಧ್ಯವಿಲ್ಲ ಎಂದು ಖುರೈಶಿಗಳು ಸಹ ಅರಿತುಕೊಳ್ಳಲಿ ಎಂಬುದು ಇದರ ಉದ್ದೇಶವಾಗಿತ್ತು. ಮೂರನೆಯದಾಗಿ, ಈ ಸಮಾಚಾರ ಸಂಗ್ರಹಿಸುವ ಈ ಗುಂಪುಗಳನ್ನು ಕಳುಹಿಸುವ ಉದ್ದೇಶ ಇದು ಸಹ ಆಗಿತ್ತು. ಮಕ್ಕ ಮತ್ತು ಅದರ ಸುತ್ತು ಮುತ್ತಲು ವಾಸಿಸುತ್ತಿದ್ದ ಬಲಹೀನ ಬಡ ಮುಸ್ಲಿಮರು ಮದೀನಕ್ಕೆ ಆಗಮಿಸಲು ಸಹಾಯ ಮಾಡುವುದಾಗಿತ್ತು. ಅಂತಹ ಮುಸ್ಲಿಮರಿಗೆ ದೌರ್ಜನ್ಯಗಾರರಿಂದ ಸಂರಕ್ಷಣೆ ನೀಡಲು ಸಾಧ್ಯವಾಗುತ್ತಿತ್ತು. ಅಂತಹ ಜನರು ಖುರೈಶಿಗಳ ಜೊತೆಗೆ ಮದೀನದ ಸಮೀಪಕ್ಕೆ ಆಗಮಿಸಿದಾಗ ಮುಸ್ಲಿಮರ ಸೈನ್ಯದ ಕಡೆಗೆ ಓಡಿ ಬರಲು ಸಹಾಯಕವಾಗುತ್ತಿತ್ತು.

ನಾಲ್ಕನೆಯದಾಗಿ, ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಖುರೈಶಿಗಳ ಕೆಲವು ವಾಣಿಜ್ಯ ಸಂಘಗಳನ್ನು ತಡೆಯಲು ಪ್ರಾರಂಭಿಸಿದರು. ಯಾಕೆಂದರೆ ಆ ವಾಣಿಜ್ಯ ತಂಡಗಳು ಮಕ್ಕದಿಂದ ಸಿರಿಯಾದ ಕಡೆಗೆ ಪ್ರಯಾಣ ಮಾಡುವಾಗ ಮದೀನಕ್ಕೆ ಸಮೀಪವಾಗಿ ಸಾಗುತ್ತಿದ್ದುವು. ಆ ವಾಣಿಜ್ಯ ತಂಡಗಳು ಸಾಗುತ್ತಿದ್ದ ಪ್ರದೇಶಗಳಲ್ಲಿ ಮುಸ್ಲಿಮರ ವಿರುದ್ಧ ಹಗೆತನದ ಅಗ್ನಿಯನ್ನು ಪ್ರಜ್ವಲಿಸುತ್ತಾ ಇದ್ದುದರಿಂದ ಹಾಗೆ ಮಾಡಲಾಯಿತು. ಅದಲ್ಲದೆ ಈ ತಂಡಗಳು ಯಾವಾಗಲೂ ಶಸ್ತ್ರ ಸಜ್ಜಿತವಾಗಿರುತ್ತಿದ್ದುವು. ಇಂತಹ ತಂಡಗಳು ಮದೀನಕ್ಕೆ ಸಮೀಪವಾಗಿ ದಾಟಿಹೋಗುವುದು ಖಂಡಿತವಾಗಿಯೂ ಅಪಾಯಕರವಾಗಿತ್ತು ಎಂದು ಪ್ರತಿಯೊಬ್ಬನು ಮನವರಿಕೆ ಮಾಡಬಲ್ಲನು. ಇದು ಮಾತ್ರವಲ್ಲ ಖುರೈಶಿಗಳ ಜೀವನಾಧಾರ ಈ ವಾಣಿಜ್ಯವಾಗಿತ್ತು. ಆದುದರಿಂದ ಖುರೈಶಿಗಳನ್ನು ದೌರ್ಜನ್ಯದಿಂದ ತಡೆಯಲು ಮತ್ತು ಶಾಂತಿ ಸಂಧಿಗೆ ನಿರ್ಬಂಧಿತರಾಗುವಂತೆ ಮಾಡಲು ಇದು ಬಹಳ ಖಂಡಿತವಾದ ಮತ್ತು ತಕ್ಷಣ ಪ್ರಭಾವ ಬೀರಬಲ್ಲ ಮಾರ್ಗೋಪಾಯವಾಗಿತ್ತು. ಚರಿತ್ರೆಯಿಂದ ತಿಳಿಯುವುದೇನೆಂದರೆ ಖುರೈಶಿಗಳನ್ನು ಶಾಂತಿ ಸಂಧಾನಗಳ ಕಡೆಗೆ ಒಲವುಂಟಾಗಲು ನಿರ್ಬಂಧಿತರಾಗುವಂತೆ ಮಾಡುವುದರಲ್ಲಿ ವ್ಯಾಪಾರ ತಂಡದ ತಡೆಗಟ್ಟುವಿಕೆ ಬಹಳ ದೊಡ್ಡ ಪಾತ್ರವಹಿಸಿತು.

ಹಝ್ರತ್ ಉತ್‌ಬ ಬಿನ್ ಗಝ್ವಾನ್‌ರ ಮದೀನದ ಕಡೆಗೆ ಹಿಜ್‌ರತ್ ಮಾಡಿದ ಬಗ್ಗೆ ಹೀಗೆ ವರದಿಯಾಗಿದೆ. ಹಿಜರಿ ವರ್ಷ 2 ರಬೀಉಲ್ ಅವ್ವಲ್ ತಿಂಗಳ ಪ್ರಾರಂಭದಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಓರ್ವ ಸಮೀಪದ ಸಂಬಂಧಿಕ ಉಬೈದ್ ಬಿನ್ ಹಾರಿಸ್ ಮತ್‌ಲಬಿಯ ನೇತೃತ್ವದಲ್ಲಿ 60–70 ಕುದುರೆ

ಸವಾರರನ್ನೊಳಗೊಂಡ ಮುಹಾಜಿರ್‌ಗಳ ಒಂದು ದಳವನ್ನು ಕಳುಹಿಸಿದರು. ಈ ದಳದ ಜನರು ಸನೀಯತುಲ್ ಮರ್‌ಅ ಎಂಬ ಸ್ಥಳಕ್ಕೆ ತಲಪಿದಾಗ ಅಲ್ಲಿ ಖುರೈಶಿಗಳ ಇನ್ನೂರು ಶಸ್ತ್ರ ಸಜ್ಜಿತ ತರುಣರು ಇಕ್ರಿಮ ಬಿನ್ ಅಬೂ ಜಹಲನ ನೇತೃತ್ವದಲ್ಲಿ ಶಿಬಿರ ಹೂಡಿರುವುದನ್ನು ಕಂಡರು. ಎರಡು ಗುಂಪುಗಳು ಪರಸ್ಪರ ಎದುರಾದುವು. ಆದರೆ ಮುಸ್ಲಿಮರ ದಳದ ಹಿಂದೆ ಬೇರೆ ಸಹಾಯಕ ದಳ ಸಹ ಇರಬಹುದು ಎಂದು ಭಾವಿಸಿ ಖುರೈಶಿಗಳು ಭಯಭೀತರಾದರು. ಆದುದರಿಂದ ಅವರು ಹಿಂದೆ ಸರಿದರು. ಆಗ ಖುರೈಶಿಗಳ ಸೇನೆಯಿಂದ ಇಬ್ಬರು, ಮಿಖ್‌ದಾದ್ ಬಿನ್ ಅಮ್ರ್ ಮತ್ತು ಉತ್‌ಬ ಬಿನ್ ಗರ್ಝ್‌ವಾನ್ ಮುಸ್ಲಿಮರೊಂದಿಗೆ ಸೇರಿಕೊಂಡರು ಏಕೆಂದರೆ ಅವರು ಹೃದಯದಲ್ಲಿ ಮುಸ್ಲಿಮರಾಗಿದ್ದರು. ಆದರೆ ತಮ್ಮ ಬಲಹೀನತೆ ಕಾರಣ ಖುರೈಶಿಗಳಿಗೆ ಭಯಪಡುತ್ತಿದ್ದರು ಮತ್ತು ಅವರಿಗೆ ಹಿಜ್‌ರತ್ ಮಾಡಲು ಸಾಧ್ಯವಾಗಿರಲಿಲ್ಲ. ಮುಸ್ಲಿಮರು ಜಾಗರೂಕರಾಗಿರುವುದಾಗಿ ಕಂಡಾಗ, ಹಾಗೂ ತಮ್ಮೊಳಗಿಂದ ಕೆಲವರು ಮುಸ್ಲಿಮರೊಂದಿಗೆ ಸೇರುವುದನ್ನೂ ಕಂಡಾಗ ಅವಿಶ್ವಾಸಿಗಳಿಗೆ ಯುದ್ಧ ಮಾಡಲು ಧೈರ್ಯ ತಲೆದೋರಲಿಲ್ಲ ಎಂಬುದು ಅಲ್ಲಾಹನ ಅನುಗ್ರಹವಾಗಿದೆ.

ಹಝ್ರತ್ ಉತ್‌ಬ ಬಿನ್ ಗರ್ಝ್‌ವಾನ್‌ರ ಕುರಿತು ಇನ್ನೂ ಕೆಲವು ವಿವರಣೆಗಳಿವೆ. ಇನ್‌ಶಾಅಲ್ಲಾಹ್ ಅವುಗಳನ್ನು ನಂತರ ವಿವರಿಸಲಾಗುವುದು. ಈಗ ಒಂದು ಪ್ರಕಟಣೆ ಇದೆ. ಅಲ್‌ಫಝ್ಲ್ ದಿನ ಪತ್ರಿಕೆಯ ವೆಬ್‌ಸೈಟ್ ನಾವು ಪ್ರಾರಂಭಿಸಿದ್ದೇವೆ. ಅಲ್‌ಫಝ್ಲ್ 106 ವರ್ಷಗಳನ್ನು ಪೂರ್ಣಗೊಳಿಸಿದ ಈ ಸಂದರ್ಭದಲ್ಲಿ ಲಂಡನ್‌ನಿಂದ ಅಲ್‌ಫಝ್ಲ್ ಆನ್‌ಲೈನ್ ಎಡಿಶನ್ ಪ್ರಾರಂಭವಾಗುತ್ತಿದೆ. ಈ ಪತ್ರಿಕೆಯನ್ನು 106 ವರ್ಷಗಳ ಮೊದಲು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರು, ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್‌ರವರ ಅನುಮತಿ ಮತ್ತು ದುಆ ಪಡೆದು 1913 ಜೂನ್ ದಿನಾಂಕ 18ರಂದು ಪ್ರಕಟಿಸಲು ಪ್ರಾರಂಭಿಸಿದರು. ಪಾಕಿಸ್ಥಾನ ಸ್ಥಾಪಿತವಾದ ನಂತರ ಸ್ವಲ್ಪಕಾಲ ಈ ಪತ್ರಿಕೆ ಲಾಹೋರಿನಿಂದ ಪ್ರಕಟಿಸಲಾಗುತ್ತಿತ್ತು. ಅನಂತರ ಹಝ್ರತ್ ಮುಸ್ಲಿಹ್ ಮೌಊದ್‌ರ ನೇತೃತ್ವದಲ್ಲಿ ರಬ್ವದಿಂದ ಪ್ರಕಟವಾಗಲು ತೊಡಗಿತು. ಈ ಪುರಾತನ ಉರ್ದು ದಿನಪತ್ರಿಕೆ ಲಂಡನ್‌ನಿಂದ ತನ್ನ ಆನ್‌ಲೈನ್ ಎಡಿಶನ್ 2019 ಡಿಸೆಂಬರ್ ದಿನಾಂಕ 13ರಂದು ಪ್ರಾರಂಭಿಸಲಿದೆ. ಇದು ಇಂಟರ್‌ನೆಟ್ ಮೂಲಕ ಲೋಕದಲ್ಲಿ ಎಲ್ಲಾ ಕಡೆಗಳಲ್ಲಿ ಸುಲಭವಾಗಿ ನೋಡಲು ಸಿಗಬಹುದಾಗಿದೆ. ಇನ್‌ಶಾಅಲ್ಲಾಹ್ ಜುಮುಅದ ನಂತರ ಇದರ ಉದ್ಘಾಟನೆ ನಡೆಯುವುದು.

ಇಬ್ಬರು ಮೃತರ ನಮಾಝ್ ಜನಾಝ ನಿರ್ವಹಿಸಲಿರುವೆನು – ಇನ್‌ಶಾಅಲ್ಲಾಹ್. ಅವರಲ್ಲಿ ಮೊದಲನೆಯ ಜನಾಝ ಮುಕರ್ರಮ ತನ್‌ವೀರುಲ್ ಇಸ್ಲಾಮ್ ಸಾಹಿಬ ಅವರದಾಗಿದೆ. ಅವರು ಮುಕರ್ರಮ್ ಮಿರ್ಝಾ ಹಫೀಝ್ ಅಹ್ಮದ್ ಸಾಹಿಬ್ ಮರ್‌ಹೂಮರ ಪತ್ನಿಯಾಗಿದ್ದರು. 2019 ಡಿಸೆಂಬರ್ ದಿನಾಂಕ 7ರಂದು 91ನೇ ವಯಸ್ಸಿನಲ್ಲಿ ನಿಧನ ಹೊಂದಿದರು – **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್.** ಅವರು ಅಲ್ಲಾಹನ ಅನುಗ್ರಹದಿಂದ ಮೂಸಿಯ ಆಗಿದ್ದರು. ಅವರ ಪಿತನ ಹೆಸರು ಮೀರ್ ಅಬ್ದುಸ್ಸಲಾಮ್ ಎಂದಾಗಿತ್ತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ದೀರ್ಘಕಾಲದ ನಿಷ್ಠಾವಂತ ಸಹಾಬಿ ಹಝ್ರತ್ ಮೀರ್ ಹುಸಾಮುದ್ದೀನ್ ಸಾಹಿಬರ ಮರಿಮೊಮ್ಮಗಳು ಆಗಿದ್ದರು. ಅವರು ಸಯ್ಯಿದ್ ಮೀರ್ ಹಾಮಿದ್ ಶಾ ಸಾಹಿಬರ ಪುತ್ರನ ಪುತ್ರಿಯಾಗಿದ್ದರು. ಅವರು ಹಝ್ರತ್ ಖಲೀಫತುಲ್ ಮಸೀಹ್ ಸಾನಿ ಅವರ ಸೊಸೆಯಾಗಿದ್ದರು. ಅವರು 1928ರಲ್ಲಿ ಸಿಯಾಲ್‌ಕೋಟ್‌ನಲ್ಲಿ ಜನಿಸಿದರು. 1948ರಲ್ಲಿ ಮಿರ್ಝಾ ಹಫೀಝ್ ಅಹ್ಮದ್ ಸಾಹಿಬರನ್ನು ವಿವಾಹವಾದರು. ಆ ರೀತಿ ಅವರು ಹಝ್ರತ್ ಖಲೀಫತುಲ್ ಮಸೀಹ್ ಸಾನಿಯವರ ಸೊಸೆಯಾದರು. ಅವರು 1956ರಿಂದ 2008ರ ತನಕ ವಿವಿಧ ಸಂದರ್ಭಗಳಲ್ಲಿ ಅಂದಾಜು 48 ವರ್ಷಗಳ ಕಾಲ ಮರ್ಕಝೀ ಲಜ್‌ನದ ಸೆಕ್ರೆಟರಿ ನುಮಾಯಿಶ್ ಆಗಿ ಕಾರ್ಯನಿರ್ವಹಿಸಲು ಭಾಗ್ಯ ಗಳಿಸಿದರು. ಅವರಿಗೆ ಹಝ್ರತ್ ಖಲೀಫತುಲ್ ಮಸೀಹ್ ಸಾನಿಯವರೊಂದಿಗೆ ಬಹಳ ಪ್ರೀತಿಯ ಸಂಬಂಧವಿತ್ತು. ಅವರು ತಹಜ್ಜುದ್ ಬಗ್ಗೆ ನಿಷ್ಠೆಯುಳ್ಳವರಾಗಿದ್ದರು. ಅವರ ಪರಿಚಾರಿಕೆ ಹೇಳುತ್ತಾರೆ: ಅವರು ಮೃತರಾಗುವ ರಾತ್ರಿ ಸಹ ಅಂದಾಜು ಮೂರು ಗಂಟೆಗೆ ಎದ್ದು ತಹಜ್ಜುದ್ ನಿರ್ವಹಿಸಿ ನಿದ್ರಿಸಿದರು. ಅದೇ ಸ್ಥಿತಿಯಲ್ಲಿ ಅವರು ನಿಧನ ಹೊಂದಿದರು. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ರಹಮ್‌ನೊಂದಿಗೆ ವರ್ತಿಸುವವನಾಗಲಿ. ಅವರ ಪದವಿಗಳನ್ನು ಉನ್ನತಗೊಳಿಸಲಿ.

ಎರಡನೆಯ ಜನಾಝ ಮರ್‌ಹೂಮ ಸಿಸ್ಟರ್ ಹಾಜ ಶಕೂರ ನೂರಿಯ ಸಾಹಿಬ ಅವರದು. ಅವರು ಅಮೇರಿಕದಲ್ಲಿ ಡಿಸೆಂಬರ್ ದಿನಾಂಕ 1ರಂದು ನಿಧನ ಹೊಂದಿದರು – **ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್.** ಅವರು 1927ರಲ್ಲಿ ಜನಿಸಿದರು. ಅವರು ಆರಂಭದಲ್ಲಿ ವಾಶಿಂಗ್‌ಟನ್ ಡಿ.ಸಿ.ಯಲ್ಲಿ ಜೀವಿಸುತ್ತಿದ್ದರು. ಅವರು 1979ರಲ್ಲಿ ಒಂದು ಸ್ವಪ್ನದಲ್ಲಿ ಪವಿತ್ರ ಖುರ್‌ಆನ್ ಪ್ರತಿಯನ್ನು ಮತ್ತು ಶಹಾದತ್ ಕಲಿಮವನ್ನು ಕಂಡರು. ಅನಂತರ ಅವರು ಇಸ್ಲಾಮ್ ಮತ್ತು ಅಹ್ಮದಿಯ್ಯತ್ ನೈಜ ಧರ್ಮವಾಗಿದೆ ಎಂದು ದೃಢವಿಶ್ವಾಸ ಹೊಂದಿದರು. ಹಾಗೆ ಅವರು ಬೈಅತ್ ಮಾಡಿದರು. ಅವರು ವಿವಿಧ ಸ್ಥಾನಗಳಲ್ಲಿ ಜಮಾಅತ್‌ಗೆ ಸೇವೆ ಸಲ್ಲಿಸಿದ್ದರು. 1986ರಲ್ಲಿ ಅವರು ವಾಶಿಂಗ್‌ಟನ್ ಡಿ.ಸಿ.ಯ ಮಜ್ಲಿಸ್‌ನ ಲೋಕಲ್ ಸದರ್ ಆಗಿ ಚುನಾಯಿಸಲ್ಪಟ್ಟರು. ಅದರಲ್ಲಿ ಅವರು 5ವರ್ಷಗಳ ಕಾಲ ಸೇವೆ ಸಲ್ಲಿಸಿದರು. 1995ರಲ್ಲಿ ಹಜ್ ನಿರ್ವಹಿಸುವ ಭಾಗ್ಯ ಗಳಿಸಿದರು. ಅವರಿಗೆ ಖಿಲಾಫತ್‌ನೊಂದಿಗೆ ಬಹಳ ಗಾಢವಾದ ಸಂಬಂಧ ಮತ್ತು ಆದರ ಭಾವನೆ ಇತ್ತು. ನಾನು 2018ರಲ್ಲಿ ಅಮೇರಿಕಕ್ಕೆ ಹೋದಾಗ ಅವರು ರೋಗಿಯಾಗಿದ್ದರೂ ವೀಲ್‌ಚೆಯರ್‌ನಲ್ಲಿ ಕುಳಿತು ನನ್ನನ್ನು ಕಾಣಲು ಬಂದಿದ್ದರು. ಅವರು ಖುತ್‌ಬಗಳನ್ನು ಬಹಳ ಕ್ರಮಬದ್ಧವಾಗಿ ಆಲಿಸುತ್ತಿದ್ದರು. ಹಿಂದೆ ಎಂ.ಟಿ.ಎ. ಪ್ರಾರಂಭವಾಗುವ ಮೊದಲು ಕ್ಯಾಸೆಟ್ ಮೂಲಕ ಖುತ್‌ಬ ಬರುತ್ತಿದ್ದಾಗ ಖುತ್‌ಬದ ಇಂಗ್ಲಿಷ್ ಭಾಷಾಂತರ ಮಾಡಲು ಬಹಳ ಸಹಾಯ ಮಾಡುತ್ತಿದ್ದರು. ನಮಾಝ್ ಬಾಜಮಾಅತ್ ಬಗ್ಗೆ ಬದ್ಧರಾಗಿದ್ದರು. ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ರಹಮ್‌ನೊಂದಿಗೆ ವರ್ತಿಸಲಿ. ಅವರ ಪದವಿಗಳನ್ನು ಉನ್ನತ ಗೊಳಿಸಲಿ. ಇಂತಹ ಸೇವೆ ಸಲ್ಲಿಸುವ ಉತ್ಸಾಹ ಹೊಂದಿದ ನಿಷ್ಠಾವಂತರಾದ ಜನರನ್ನು ಜಮಾಅತಿಗೆ ಅಲ್ಲಾಹನು ದಯಪಾಲಿಸುವವನಾಗಲಿ – ಆಮೀನ್.

اَلْحَمْدُ لِلّٰهِ نَحْمَدُهٗ وَ نَسْتَعِيْنُهٗ وَ نَسْتَغْفِرُهٗ وَنُؤْمِنُ بِهٖ وَ نَتَوَكَّلُ
عَلَيْهِ وَنَعُوْذُ بِاللّٰهِ مِنْ شُرُوْرِ اَنْفُسِنَا وَ مِنْ سَيِّئَاتِ اَعْمَالِنَا مَنْ
يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ فَلَا هَادِيَ لَهٗ - وَنَشْهَدُ اَنْ لَّا
اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ - عِبَادَ اللّٰهِ رَحِمَكُمُ
اللّٰهُ اِنَّ اللّٰهَ يَاْمُرُ بِالْعَدْلِ وَ الْاِحْسَانِ وَ اِيْتَآءِ ذِي الْقُرْبٰى وَيَنْهٰى
عَنِ الْفَحْشَآءِ وَ الْمُنْكَرِ وَ الْبَغْيِ يَعِظُكُمْ لَعَلَّكُمْ تَذَكَّرُوْنَ
اُذْكُرُوا اللّٰهَ يَذْكُرْكُمْ وَ ادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ -

*****

## ಜಲ್ಸ ಸಾಲಾನ ಖಾದಿಯಾನ್

**ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ಈ ಜಲ್ಸದೊಂದಿಗೆ ಅನೇಕ ಅನುಗ್ರಹಗಳು ಅನಿವಾರ್ಯವಾಗಿ ಸೇರಿಕೊಂಡಿರುವುದರಿಂದ ದಾರಿ ಖರ್ಚಿಗೆ ಸಾಮರ್ಥ್ಯವಿರುವ ಪ್ರತಿಯೊಬ್ಬನು ಈ ಜಲ್ಸಕ್ಕೆ ಆಗಮಿಸಬೇಕು. ಚಳಿಗಾಲಕ್ಕೆ ಆವಶ್ಯಕವಾದ ಹಾಸುವ ಮತ್ತು ಹೊದಿಕೆ ಬಟ್ಟೆಗಳನ್ನು ಆವಶ್ಯಕವಾದಷ್ಟು ತರಬೇಕು. ಅಲ್ಲಾಹನ ಮತ್ತು ಅವನ ರಸೂಲರ ಮಾರ್ಗದಲ್ಲಿ ಚಿಕ್ಕಪುಟ್ಟ ಅಡ್ಡಿ ಆತಂಕಗಳನ್ನು ನಿರ್ಲಕ್ಷಿಸಬೇಕು. ಅಲ್ಲಾಹನು ನಿಷ್ಠಾವಂತನಿಗೆ ಪ್ರತಿಯೊಂದು ಹೆಜ್ಜೆಯಲ್ಲಿಯೂ ಅನುಗ್ರಹ ನೀಡುತ್ತಾನೆ. ಅವನ ಮಾರ್ಗದಲ್ಲಿ ಪಡುವ ಕಷ್ಟಗಳನ್ನು ವ್ಯರ್ಥಗೊಳಿಸುವುದಿಲ್ಲ. ನಾನು ಪುನರಾವರ್ತಿಸಿ ಬರೆಯುತ್ತೇನೆ ಈ ಜಲ್ಸವನ್ನು ಮಾನವರ ಸಾಮಾನ್ಯ ಜಲ್ಸದ ಹಾಗೆಂದು ಯೋಚಿಸಬೇಡಿರಿ. ಇದು ಸತ್ಯಕ್ಕೆ ಬೆಂಬಲ ನೀಡುವ ಮತ್ತು ಇಸ್ಲಾಮಿನ ಪ್ರಚಾರ ಮಾಡುವ ಅಸ್ತಿಭಾರವನ್ನು ಹೊಂದಿದೆ. ಈ ಜಮಾಅತಿನ ಅಸ್ತಿಭಾರವನ್ನು ಅಲ್ಲಾಹನು ತನ್ನ ಕೈಯಿಂದ ಹಾಕಿದ್ದಾನೆ. ಇದಕ್ಕೋಸ್ಕರ ಅಲ್ಲಾಹನು ಸಮುದಾಯಗಳನ್ನು ಸಿದ್ಧಪಡಿಸಿಟ್ಟಿದ್ದಾನೆ. ಅವರು ಬೇಗನೆ ಇದರಲ್ಲಿ ಬಂದು ಸೇರುವರು. ಯಾಕೆಂದರೆ ಇದು ಸರ್ವಶಕ್ತನಾದವನ ಕೆಲಸವಾಗಿದೆ. ಅವನಿಗೆ ಅಸಾಧ್ಯವಾದುದು ಏನೂ ಇಲ್ಲ."**

**ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ: "ಅಲ್ಲಾಹನಿಗೋಸ್ಕರ ಈ ಜಲ್ಸದಲ್ಲಿ ಭಾಗವಹಿಸಲು ಪ್ರಯಾಣ ಮಾಡುವ ಪ್ರತಿಯೊಬ್ಬನ ಜೊತೆಗೆ ಅಲ್ಲಾಹನು ಜೊತೆಗಾರನಾಗಿರಲಿ. ಅವನಿಗೆ ಬೃಹತ್ತಾದ ಪ್ರತಿಫಲ ನೀಡಲಿ. ಅವರೆಲ್ಲರಿಗೆ ಕಾರುಣ್ಯದೋರಲಿ. ಅವರ ಕಷ್ಟಗಳನ್ನೂ ಆತಂಕಭರಿತ ಸ್ಥಿತಿಯನ್ನೂ ನಿವಾರಿಸಿ ಅವರಿಗೆ ಸೌಲಭ್ಯ ನೀಡುವಂತಾಗಲಿ. ಅವರ ಚಿಂತೆಗಳನ್ನೂ ದುಃಖಗಳನ್ನೂ ದೂರ ಸರಿಸಲಿ. ಅವರಿಗೆ ಪ್ರತಿಯೊಂದು ಕಷ್ಟದಿಂದ ಮುಕ್ತಿಯನ್ನು ದಯಪಾಲಿಸಲಿ. ಅವರ ಇಚ್ಛೆಗಳ ಮಾರ್ಗಗಳನ್ನು ಅವರಿಗೆ ತೆರೆದುಕೊಡಲಿ. ಆಖಿರತ್‌ನಲ್ಲಿ ಅಲ್ಲಾಹನು ಅವರನ್ನು ತಾನು ಅನುಗ್ರಹ ಮತ್ತು ಕಾರುಣ್ಯ ನೀಡಿದ ತನ್ನ ದಾಸರೊಂದಿಗೆ ಎದ್ದೇಳಿಸಲಿ. ಅವರ ಪ್ರಯಾಣದ ಅಂತ್ಯದ ವರೆಗೂ ಅವರ ಬದಲು ಅವರ ಪ್ರತಿನಿಧಿಯಾಗಿರಲಿ. ಓ ಅಲ್ಲಾಹ್, ಕೀರ್ತಿಶಾಲಿಯೂ ವರದಾನ ನೀಡುವವನೂ ಕಾರುಣ್ಯಮಯನೂ ಕಷ್ಟ ಪರಿಹರಿಸುವವನೂ ಆಗಿರುವ ನೀನು ಈ ಎಲ್ಲ ಪ್ರಾರ್ಥನೆಗಳನ್ನೂ ಅಂಗೀಕರಿಸು. ನಮ್ಮ ವಿರೋಧಿಗಳ ವಿರುದ್ಧ ಪ್ರಕಾಶಮಾನವಾದ ದೃಷ್ಟಾಂತಗಳ ಮೂಲಕ ನಮಗೆ ಜಯವನ್ನು ನೀಡು. ಎಲ್ಲಾ ಶಕ್ತಿಸಾಮರ್ಥ್ಯಗಳು ನಿನ್ನಲ್ಲಿ ಮಾತ್ರ ಇವೆ" – ಆಮೀನ್ ಸುಮ್ಮ ಆಮೀನ್.**

**(ಮಜ್‌ಮೂಅ ಇಶ್ತಿಹಾರಾತ್ ಸಂಪುಟ–1 ಪುಟ 341–342, ಇಶ್ತಿಹಾರ್ 1892 ಡಿಸೆಂಬರ್ ದಿನಾಂಕ 7)**


***Friday Sermon delivered by Hadrath Khaleefatul Masih Al Khamis***(*atba*)

*At, Masjid Mubarak, Islamabad, Tilford, UK, On 13-12-2019*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim |***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

**Email**: *khutuba.kannada@gmail.com*

**You can find all the Sermons archived at**: www.alislam.org/friday-sermon